ಬೆಳಕರಿಲಿ ನೋಡ್ಕ್ಯಂಬನ' ಅಂತ ಹೇಳಿದ್ದರು. ಕರಿಯಜ್ಜ ಮನೆಮುಂದೆ ಬಂದು ಕೂಗಿದ್ದರಿಂದ ಮಂಜಣ್ಣನ ಹೆಂಡ್ತಿ ಮಕ್ಕಳು, ಬಂಧುಗಳೆಲ್ಲ ಹೊರಗೆ ಬಂದು ಅಂಗಳದಲ್ಲಿ ನಿಂತಿದ್ದು ಕಂಡು ಆ ಓಣಿಯ ಜನರೆಲ್ಲ ಇವರ ಮನೆಕಡೆ ಕನಿಕರದಿಂದ ನೋಡುತ್ತಿದ್ದರು. ಕವಿತಮ್ಮನಿಗೆ ಅಂಗಾಲಗಳಿಂದ ಉರಿ ಎದ್ದಂತಾಗಿ, 'ನಾವೇನು ಮಾಡಬಾರದ ತಪ್ಪು ಮಾಡಿದೀವಿ ಅಂತ ಪಂಚಾಯ್ತಿ ಕರೆದಿದಾರೆ? ನಮ್ಮ ನೋವಿನಲ್ಲಿ ನಾವಿದಿವಿ. ಈ ಲೇವ್ಡಿ ನನ್ನಾಟಗಳ್ರಿಗೆ ಸಿನ್ನಾಟ ಆಗೈತೆ' ಅಂತ ಬಯ್ಯುತ್ತಿದ್ದಳು. ಹೆಂಡತಿ ಬಾಯಿ ಮಾಡಿದ್ದು ಮಂಜಣ್ಣನಿಗೆ ಹಿಡಿಸಲಿಲ್ಲ. 'ಪಂಚಾಯ್ತಿ ಕರೆದಿದಾರೆ ತಾನೆ? ಕರಿಲಿ ಬಿಡು, ಹೋಗಿ ಅದೇನಂತ ವಿಚಾರಿಸಿಕೊಂಡು ಬಂದ್ರಾಯ್ತು' ಅಂತೇಳಿ ಹೆಂಡತಿಯನ್ನ ಸುಮ್ಮನಿರಿಸಿದ್ದ.

ಮೂರು ದಿನದ ಹಿಂಡುಕೂಳಿಗೆ ಬಂದಿದ್ದ ಮಂಜಣ್ಣನ ಚಿಗದೊಡಪ್ಪನ ಮಕ್ಕಳು, ಸೋದರತ್ತೆ ಮಕ್ಕಳು, ಹತ್ತಿರದ ಬಂಧುಗಳು ಪಂಚಾಯ್ತಿ ವಿಚಾರ ಕೇಳಿ ಕಂಗಾಲಾಗಿದ್ರು. ಅವರಿಗೆಲ್ಲ ಸಮಾಧಾನ ಹೇಳಿದ ಮಂಜಣ್ಣ, 'ನೀವ್ಯಾರು ಗಾಬರಿ ಆಗಬೇಡಿ. ಅದೇನು ದೊಡ್ಡ ವಿಚಾರ ಅಲ್ಲ. ನಾನೆಲ್ಲ ನಿಭಾಯಿಸಿಕೋಳ್ತಿನಿ' ಅಂತೇಳಿ ಬಂದಿರೊ ಜನ ಉಸೂರು ಅನ್ನಬಾರದೆಂದು ಮಳೆ ಬಿಟ್ಟಿದ್ದರಿಂದ ಹುಡುಗರಿಗೂ ಭಜನೆಯವರಿಗೂ ಉಣ್ಣಾಕಿಡೋಕೆ ಹೆಂಡ್ತಿಗೆ ಹೇಳಿ ಒಳಗಡೆ ಕಳಿಸಿದ. ಬಂದಿರುವ ಬಂಧುಗಳಿಗೆ ದುಃಖದ ಹೆಂಡ ಕುಡಿಸುವ ಸಂಪ್ರದಾಯಕ್ಕೆ ಕಟ್ಟುಬಿದ್ದ ಮಂಜಣ್ಣ, ಸೆಕೆಂಡ್ಸ್ ಮಾರೊ ಸೀನಪ್ಪನ ಅಂಗಡಿಗೆ ಹೋಗಿ ಅರ್ಧಡಜನ್ ಬ್ರಾಂದಿಬಾಟ್ಲು ತರುವ ಧಾವತಿಯಲ್ಲಿ ಹೊರಟಾಗ, ಪಕ್ಕದ ಮನೆ ತಿಪ್ಪೇಶಪ್ಪನ ಜೊತೆಗೆ ಕೋಳಿರಂಗಜ್ಜನೂ ಜೊತೆಯಾದ. ಕುಡಿದ ನಿಶೆಯಲ್ಲಿ ರಾತ್ರಿ ಹೊತ್ತು ಮೀರುವ ತನಕ ಬೆಳಿಗ್ಗೆ ನಡೆಯುವ ಪಂಚಾಯ್ತಿದೇ ಮಾತುಕತೆಯಾಗಿತ್ತು. ಈಗ ಬೆಳಕು ಹರಿದು ಬಿಸಿಲು ಬಲಿಯುವುದರೊಳಗೆ ಪಂಚಾಯ್ತಿಗೆ ಕರೆದಿದ್ದು ನೋಡಿ ಮಂಜಣ್ಣನಿಗೆ ನಗು ಬಂದಿತ್ತು.

"ಏನ್ ಮಂಜಣ್ಣ ಪಂಚಾಯ್ತಿದಾರರು ಜುಲ್ಮಾನೆ ಹಾಕೋಕೆ ತುಂಬಾ ಜೋರಾಗಿದಾರೆ. ರಾತ್ರಿಯಿಂದ ಎಲೆತೋಟದ ಮಲ್ಲಪ್ಪ ನಿದ್ದೆ ಹೋಗಿಲ್ಲ ಅನ್ಸುತ್ತೆ" ಅರೆ ನಿದ್ದೆಯಲ್ಲಿದ್ದ ತಿಪ್ಪೇಶಪ್ಪ ಆಕಳಿಸುತ್ತಾ ಹೇಳಿದ. "ಈ ಊರಿನ ಪಂಚಾಯ್ತಿದಾರರ ಬುದ್ಧಿ ನನಗೆ ಗೊತ್ತಿಲ್ವೆ? ಮೆತ್ತಗಿದ್ರೆ ದ್ವಾಸೆ ಒಯ್ತಾರೆ, ಗಟ್ಟಿಗಿದ್ರೆ ರೊಟ್ಟಿ ಸುಡ್ತಾರೆ" ಅಂತ ಹೇಳುತ್ತಾ ಮಾಳಿಗೆಯಿಂದ ಕೆಳಗಿಳಿದ ಮಂಜಣ್ಣ ಕಾಲಿಗೆ ಅಂಟಿರೊ ಕಸ್ಲು ತೊಳಕೊಂಡ. "ಅವರ ಸಂಪ್ರದಾಯ ಅವರಿಗಿದ್ರೆ ನಮ್ಮ ಸಂಪ್ರದಾಯ ನಮಗಿರುತ್ತೆ. ನಾನು ತಿನ್ನೊ ಅನ್ನಕ್ಕೆ ಅಡ್ಡಿಪಡಿಸೋಕೆ ನೀವ್ಯಾರು ಅಂತ ಕೇಳ್ತೀನಿ. ನನಗೇನು ಭಯವೇನು?" ಎಂದು ನಾಲೋರಿಗೆ ಕೇಳಂಗೆ ಬಾಯಿ ಮಾಡಿದ ಮಂಜಣ್ಣ, ಗುರುಪುತ್ರ ದಾಸಪ್ಪನಿಗೆ ಹಾಗೂ ಮಹಾನಾಯಕ ಯುವಕ ಸಂಘದ ಅಧ್ಯಕ್ಷನಿಗೆ ಹೇಳಿಕಳಿಸಿ ಪಂಚಾಯ್ತಿಕಟ್ಟೆ ಕಡೆ ಹೊರಟ. ಅವನ ಹಿಂದೆ ಕುಟುಂಬದವರು, ಬಂಧು ಬಳಗದವರು, ಕೇರಿಯ ಕುಲಸ್ಥರು ಹೊರಟರು.

ಮಂಜಣ್ಣನ ಏಳಿಗೆಯನ್ನು ಸಹಿಸದ ಕೇರಿಯ ಕೆಲವರು, "ಇದೆಲ್ಲಾ ರಾಮಾಯಣ ಯಾಕ್ ಬೇಕಿತ್ತಪ್ಪ? ಮೂರುದಿನದ ಹಿಂಡು ಕೂಳಿಗೆ ಪಾಯಾಸ ಮಾಡಿದ್ರೆ ಸಾಕಾಗಿತ್ತು. ನೀರಿಗೆ ಎದುರಾಗಿ ಈಜೋಕಾಗಲ್ಲ, ಊರ್ನ ಎದುರಾಕ್ಕೊಂಡು ಬಾಳೋಕಾಗಲ್ಲ ಅಮ್ತಾರೆ. ಈಗ ನೋಡು ಪಂಚಾಯ್ತಿ ಮುಂದೆ ನಾವೆಲ್ಲ ತಲೆ ತಗ್ಗಿಸಿ ನಿಲ್ಲಬೇಕು" ಅಂತ ಮಾತಾಡಿಕೊಂಡು ಹೋಗೋದು ಕೇಳಿಸಿಕೊಂಡ ಮಹಾನಾಯಕ ಯುವಕ ಸಂಘದ ಹುಡುಗರು ಸಿಡುಮ್ನ ಸಿಟ್ಟಾಗಿ, "ನಿಮ್ಮಂಥ ಹೇತ್ಲಾಂಡಿಯವರಿಂದ ನಾವಿನ್ನು ತಲೆ ತಗ್ಗಿಸಿ ಬಾಳ್ತಿರೋದು. ಮಂಜಣ್ಣ ಮಾಡಬಾರದ ತಪ್ಪೇನು ಮಾಡಿಲ್ಲ. ನೀವು ಸುಮ್ನೆ ನಡೀರಿ" ಅಂತ ಖಾರವಾಗಿ ಹೇಳಿದ್ರು. 'ತಲೆಗೆ ಮೆಟ್ಟು ಕೇಳರ್ತಾಗೆ ಏನುಮಾತು ನಡಿರೊ. ಉಪ್ಪುತಿಂದವರು ನೀರು ಕುಡಿತಾರೆ' ಅಂತ ಮನಸೊಳಗೆ ಬಯ್ದುಕೊಳ್ಳುತ್ತಾ ಹೋಗುತ್ತಿದ್ದರು.

ಈ ಪಂಚಾಯ್ತಿಗೆಲ್ಲ ಕಾರಣ, ಮಂಜಣ್ಣ ತನ್ನ ತಂದೆಯ ಮೂರು ದಿನದ ಹಿಂಡುಕೂಳಿಗೆ ನಾಟಿಕೋಳಿ ಕೊಯ್ದಿರೋದು. ಎರಡು ವಾರದ ಹಿಂದೆ, ಮೊದಲನೆ ಶ್ರಾವಣ ಶನಿವಾರ ಹನುಮಂತರಾಯನ ಗುಡಿಯ ಗೋಪುರಕ್ಕೆ ಕಳಸ ಪ್ರತಿಷ್ಠಾಪನೆ ಮಾಡಿ, ಹೋಮ ಸುಡಿಸಿದ್ದರಿಂದ ನಲವತ್ತು ದಿನ ಊರಿನಲ್ಲಿ ಯಾರೂ ಮಾಂಸದ ಸಾರು ಮಾಡಂಗಿಲ್ಲ ಅಂತ ಡಂಗೂರ ಸಾರಿದ್ದರು. ಮೈಕಿನಲ್ಲೂ ಅನೌನ್ಸ್ ಮಾಡಿದ್ದರು. ಆ ಕಳಸ ಪ್ರತಿಷ್ಠಾಪನೆ ಮಾಡುವಾಗ ಹಿಟ್ನರ್ರಿ ತಿರುಗಿಸೊ ವಿಚಾರಕ್ಕೆ ಊರಾಗಳೋರಿಗೂ ಮಾದಿಗರಿಗೂ ವಾಗ್ವಾದ